## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ

**CC No: 128/2019**

| | | |
|---|---|---|
| CW : 1 | | PW: 1 |
| ಹೆಸರು | : | ಸಿಂಚನಾ@ ಶರಣಮ್ಮ |
| ಗಂಡನ ಹೆಸರು | : | ಶರಣಪ್ಪ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಮನೆಗೆಲಸ |
| ಸ್ಥಳ | : | ಮರತೂರ |

**(ದಿನಾಂಕ: 28-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**
**ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ**

ಆರೋಪಿ ನಂ.1 ನನ್ನ ಗಂಡನಾಗಬೇಕು. ಆರೋ.ಪಿ ನಂ.2 ನನ್ನ ಅತ್ತೆ. ಆರೋಪಿ ನಂಃ 3 ಮತ್ತು 4 ನಾದಣಿಯರು. ಆರೋಪಿ ನಂಃ 5 ನನ್ನ ಮೈದುನ, ಚಾಸಾ-2 ರಿಂದ 5 ಮತ್ತು 7 ರವರ ಪರಿಚಯ ಇರುತ್ತದೆ. ಚಾಸಾ6 ನನ್ನ ತಾಯಿ. ದಿಃ 05-04-2010 ರಂದು ಶ್ರೀ ಅಣವೀರಭದ್ರಶ್ವರ ದೇವಸ್ಥಾನ ಮರತೂರನಲ್ಲಿ ಆರೋಪಿ ನಂಃ 1 ಶರಣಪ್ಪ ರವರೊಂದಿಗೆ ಮದುವೆ ಆಗಿರುತ್ತದೆ. ಮದುವೆಯಲ್ಲಿ 6 ತೊಲೆ ಬಂಗಾರ, 60 ವರದಕ್ಷಿಣೆ, 1 ಲಕ್ಷ ರೂಪಾಯಿ ಬೆಲೆಬಾಳುವ ಸಾಮಾನುಗಳನ್ನು ಕೊಟ್ಟು ಎಲ್ಲರ ಸಮ್ಮುಖದಲ್ಲಿ ಮದುವೆಯಾಗಿರುತ್ತದೆ. 4 ತಿಂಗಳವರೆಗೆ ಸರಿಯಾಗಿ ಇಟ್ಟುಕೊಂಡಿರುತ್ತಾರೆ. 4 ತಿಂಗಳ ನಂತರ ನನ್ನ ನಾದಣಿಯವರು ನನಗೆ ಅಡುಗೆ ಮಾಡಲು ಬರುವುದಿಲ್ಲ ಅಂತಾ ಆರೋಪಿ ನಂಃ 3 ಮತ್ತು 4 ರವರು ಬೈಯುತ್ತಿದ್ದರು. ಆರೋಪಿ ನಂಃ 5 ನನ್ನ ಮೈದುನ 4 ತೊಲೆ ಬಂಗಾರ ತೆಗೆದುಕೊಂಡು ಬಾ ಅಂತಾ ತನ್ನ ತಾಯಿ ಆರೋಪಿ ನಂಃ 2 ರವರಿಗೆ ಹೇಳುತ್ತಿದ್ದನು. ಆರೋಪಿ ನಂಃ 2 ರವರು ನನ್ನ ಗಂಡನಿಗೆ ಹೇಳಿ ಅವರಿಂದ ನನಗೆ ಹೊಡೆ ಬಡೆ ಮಾಡಿಸಿ, ಬೈಯಿಸುತ್ತಿದ್ದಳು. ನನ್ನ ಮಗನಿಗೂ ಸಹ ನನ್ನ ಹತ್ತಿರ ಇರಲು ಬಿಡುತ್ತಿರಲಿಲ್ಲ. ಹಿರಿಯರಾದ ಸಂಗಮೇಶ ಮತ್ತು ಭಗಂವತರಾಯರ ಸಮ್ಮುಖದಲ್ಲಿ 2 ಬಾರಿ ನ್ಯಾಯ ಪಂಚಾಯಿತಿ ಮಾಡಿ ನನಗೆ ಮರತೂರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಇದೇ ರೀತಿ ನನಗೆ ಕಿರುಕುಳ ಮಾಡಿದ್ದರಿಂದ ನನ್ನ ತಾಯಿ ಬಂದು ದಿಃ 02-04-2018 ರಂದು ಮೆಣಜಿಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಕಲಬುರಗಿ ಕೌಟುಂಬಿಕ ನ್ಯಾಯಾಲಯದಿಂದ ಜೀವನ ನಡೆಸಲು ಬಾ ಅಂತಾ ನನಗೆ ನೋಟಿಸ ಬಂದಿರುತ್ತದೆ. ನಂತರ ನಾನು ದಿಃ 20-06-2019 ರಂದು ಅವರ ಜೊತೆ ಹೋಗಿರುತ್ತೇನೆ. ಹೋದ ನಂತರ ನನಗೆ ಮತ್ತೆ ಕಿರುಕುಳ ಮಾಡಿರುತ್ತಾರೆ. ಆರೋಪಿ ನಂಃ 4 ರವರ ಮಗನ ಬಟ್ಟೆಯನ್ನು ಮಲದಲ್ಲಿ( ಸಂಡಾಸ) ಒದ್ದಾಡಿಸಿ ನಾನೇ ಒದ್ದಾಡಿಸಿರುತ್ತೇನೆ ಅಂತಾ ನನ್ನ ಮೇಲೆ ಆರೋಪಿ ಮಾಡಿರುತ್ತಾರೆ. ಮತ್ತೆ ನಾನು ಫ್ಯಾಮಿಲಿ ಕೊರ್ಟಗೆ ದೂರು ಕೊಡಲು ಹೋಗಿರುತ್ತೇನೆ. ಆಗ ನನ್ನ ಗಂಡ ಹಾಜರು ಆಗಿರಲಿಲ್ಲ. ಏಕೆ ಬರಲಿಲ್ಲ ಅಂತಾ ಕೇಳಲು ಹೋದಾಗ ಆನಂದ ತಂದೆ ಆಶೋಕ ಚಾಸಾ-7 ರವರು ನನ್ನ ಗಂಡ 2 ನೇ ಮದುವೆಯಾಗಿರುತ್ತಾನೆ ಅಂತಾ ಹೇಳಿರುತ್ತಾರೆ. ದಿಃ 26-01-2019 ರಂದು ನಾನು ಮತ್ತು ನನ್ನ ತಾಯಿ ಮತ್ತೆ ಮರತೂರಕ್ಕೆ ಬೆಳಿಗ್ಗೆ 09-00 ಕ್ಕೆ ಹೋಗಿರುತ್ತೇವೆ. ಅಲ್ಲಿ ನಬಿ ಹೊಟೇಲ್ ಅಂತಾ ಇದ್ದು, ಅಲ್ಲಿ ನನ್ನ ಗಂಡ ಸಿಕ್ಕಿದ್ದು, ಆತನಿಗೆ ಏಕೆ 2 ನೇ ಮದುವೆ ಆಗಿರುತ್ತಿ ಅಂತಾ

ಕೇಳಿದಾಗ ಆತನು ನನಗೆ ನಾನು ಇನ್ನೂ 10 ಮದುವೆ ಆಗುತ್ತೇನೆ ನೀನು ಯಾರು ಕೇಳಲು ಬೋಸುಡಿ ಅಂತಾ ಬೈದಿರುತ್ತಾನೆ. ನಂತರ ನಾನು ಹಾಗೂ ನನ್ನ ತಾಯಿ ನಮ್ಮ ಊರಿಗೆ ಬಂದಿರುತ್ತೇವೆ. ಇಷ್ಟೇ ಆಗಿರುತ್ತದೆ. ನನ್ನ ನಾದಣಿಯರು ದಿನಾಲೂ ಕಿರಿಕಿರಿ ಮಾಡುತ್ತಿದ್ದರು. ಸಾಕ್ಷಿಯು ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1 (ಎ) ಎಂದು ಗುರುತಿಸಲಾಯಿತು. ಇಷ್ಟನ್ನು ಹೊರತುಪಡಿಸಿ ಬೇರೆನೂ ಆಗಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

**ಪಾಟೀ ಸವಾಲು: ಸ.ಸ. ಅಭೀಯೋಜಕರಿಂದ**

ದಿಃ 20-06-2018 ರಂದು ನಾನು ನನ್ನ ಗಂಡನ ಜೊತೆಗೆ ಮನೆಗೆ ಹೋಗಿರುತ್ತೇನೆ ಅಂದರೆ ಸರಿ. ದಿಃ 09-02-2019 ರಂದು 04-00 ರಿಂದ 05-00 ರವರೆಗೆ ಪಂಚನಾಮೆಯನ್ನು ಮಾಡಿದ್ದು, ಜಾಗೆಯನ್ನು ನಾನೇ ತೋರಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಬಿ. ಎಸ್. ಎಂ. ಆರೋಪಿತರ ಪರ ವಕೀಲರಿಂದಃ**

ನಾವು ಇಬ್ಗರೂ ಅಕ್ಕ ತಂಗಿಯರು. ಇಬ್ಬರದು ಮದುವೆಯಾಗಿದೆ ಅಂದರೆ ಸರಿ. ನನ್ನ ಅಕ್ಕ ಈಗಲೂ ನಮ್ಮ ತಂದೆ ತಾಯಿ ಮನೆಯಲ್ಲಿ ಇದ್ದಾಳೆ ಅಂದರೆ ಸಾಕ್ಷಿಯು ಗಂಡನ ಮನೆಯಲ್ಲಿ ಇದ್ದಿರುವುದಾಗಿ ಹೇಳುತ್ತಾರೆ. ನನ್ನ ಮದುವೆಯಾಗಿ 12 ವರ್ಷಗಳು ಆಗಿರುತ್ತದೆ. ನಾನು ಮದುವೆಯಾಗಿ 7 ರಿಂದ 8 ವರ್ಷದವರೆಗೆ ಗಂಡನ ಮನೆಯಲ್ಲಿ ಚನ್ನಾಗಿ ಇದ್ದೆ ಅಂದರೆ ಸರಿ. ನನ್ನ ಮದುವೆ ಕಾಲಕ್ಕೆ ನನ್ನ ನಾದಣಿಯರ ಮದುವೆ ಆಗಿತ್ತು ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಅಲ್ಲಿಯೇ ಇದ್ದರು ಎಂದು ಹೇಳುತ್ತಾರೆ. ನನ್ನ ಮದುವೆ ಕಾಲಕ್ಕೆ ಆರೋಪಿ ನಂಃ 5 ರವರ ಮದುವೆಯಾಗಿರಲಿಲ್ಲ ಅಂದರೆ ಸರಿ. ನನ್ನ ಗಂಡ ಜೇಸ್ಕಾಂನಲ್ಲಿ ಕ್ಯಾಸಿಯರ್ ಅಂತಾ ಕೆಲಸ ಮಾಡುತ್ತಾನೆ ಅಂದರೆ ಸರಿ. ಆತನಿಗೆ 90 ಸಾವಿರದಿಂದ ರಿಂದ 1 ಲಕ್ಷ ರೂಪಾಯಿವರೆಗೆ ಸಂಬಳ ಇದೆ ಅಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆತನಿಗೆ ಮರಸೂರ ಗ್ರಾಮದಲ್ಲಿ 20 ರಿಂದ 27 ಎಕರೆ ಜಮೀನು ಇದೆ ಅಂದರೆ ನನಗೆ ಗೊತ್ತಿರುವುದಿಲ್ಲ. ಮರತೂರ ಗ್ರಾಮದಲ್ಲಿ 2 ಮನೆಗಳು ಇವೆ ಅಂದರೆ ಸರಿ. ನನಗೆ ಕೈಲಾಸ ಅಂತಾ ಮಗ ಇದ್ದಾನೆ ಅಂದರೆ ಸರಿ. ಆತನ ಹುಟ್ಟಿದ ದಿನಾಂಕ ಎಷ್ಟು ಅಂದರೆ ಸಾಕ್ಷಿ ದಿಃ 22-05-2013 ಎಂದು ಹೇಳುತ್ತಾರೆ. ನಿನ್ನ ಮಗ ಕೈಲಾಸ ಇತನು 2014 ರಲ್ಲಿ ಹುಟ್ಟಿರುತ್ತಾನೆ ಅಂದರೆ ಸರಿ. ಈಗ ಆತನಿಗೆ 9 ವರ್ಷ ವಯಸ್ಸು ಅಂದರೆ ಸರಿ. ನನ್ನ ಮಗ ಆರೋಪಿ ನಂಃ 1 ರವರೊಂದಿಗೆ ವಾಸ ಇದ್ದು, ಆತನು ಶಹಾಪೂರನ ರೇಸಿಡೆನಸ್ಸಿ ಶಾಲೆಯಲ್ಲಿ ಕಲಿಯುತ್ತಿದ್ದಾನೆ ಅಂದರೆ ನನಗೆ ಗೊತ್ತಿರುವುದಿಲ್ಲ. ಕೈಲಾಸನ ಶಾಲೆಯ ವೆಚ್ಚ ವರ್ಷಕ್ಕೆ 3 ರಿಂದ 4 ಲಕ್ಷರೂಪಾಯಿ ಇರುತ್ತದೆ ಅಂದರೆ ನನಗೆ ಗೊತ್ತಿರುವುದಿಲ್ಲ. ಸದರಿ

ವೆಚ್ಚವನ್ನು ಆರೋಪಿ ನಂಃ 1 ರವರೇ ನೋಡಿಕೊಳ್ಳುತ್ತಾರೆ ಅಂದರೆ ಸಾಕ್ಷಿಯು ಅವರ ಬಳಿ ಇರುವುದರಿಂದ ಅವರೇ ನೋಡಿಕೊಳ್ಳುತ್ತಿರುವುದಾಗಿ ಹೇಳುತ್ತಾರೆ.

ನನ್ನ ಪ್ರಸೂತಿ ಆಸ್ಪತ್ರೆಯಲ್ಲಿ ಆಗಿರುತ್ತದೆ. 9 ತಿಂಗಳ ಮಗ ಇರುವಾಗ ನಾನು ಮಗವನ್ನು ತೆಗೆದುಕೊಂಡು ನನ್ನ ತವರು ಮನೆಗೆ ಹೋಗಿರುತ್ತೇನೆ ಅಂದರೆ ಸರಿಯಲ್ಲ. 9 ವರ್ಷ ಮಗುವನ್ನು ತಂದೆಯ ಬಳಿ ಬಿಟ್ಟು, ನಾನು ತವರು ಮನೆಯಲ್ಲಿ ಇದ್ದೆ ಅಂದರೆ ಸರಿಯಲ್ಲ. ನಾನು 2020 ರಲ್ಲಿ ಕಲಬುರಗಿ ನ್ಯಾಯಾಲಯದಲ್ಲಿ ನನ್ನ ಮಗು ಬೇಕು ಅಂತಾ ಕೇಸ ದಾಖಲು ಮಾಡಿರುತ್ತೇನೆ ಅಂದರೆ ಸರಿ. ಸದರಿ ಪ್ರಕರಣ ಇನ್ನೂ ಚಾಲ್ತಿ ಇದೆ ಅಂದರೆ ಸರಿ.

ಆರೋಪಿ ನಂಃ 1 ರವರು ಕೌಟುಂಬಿಕ ನ್ಯಾಯಾಲಯದಲ್ಲಿ ಹೆಂಡತಿ ಬೇಕು ಅಂತಾ ಅರ್ಜಿ ಹಾಕಿದ್ದು, ಅಲ್ಲಿಂದ ನ್ಯಾಯಾಲಯದ ಮೌಖಿಕ ಆದೇಶದಂತೆ ನಾನು ಹಾಗೂ ನನ್ನ ಗಂಡ ಮರಸೂರಕ್ಕೆ ಬಂದಿದ್ದು, ಆ ಮಧ್ಯರಾತ್ರಿ 01-00 ಕ್ಕೆ ನಾನು ನನ್ನ ಗಂಡನಿಗೆ ಹೇಳದೇ ಕೇಳದೇ ತವರು ಮನೆಗೆ ಹೋಗಿರುತ್ತೇನೆ ಅಂದರೆ ಸರಿಯಲ್ಲ. ನಂತರ ಆರೋಪಿ ನಂಃ 1 ರವರು ಶಹಾಬಾದ ಪೊಲೀಸ್ ಠಾಣೆಯಲ್ಲಿ ನನ್ನ ಹೆಂಡತಿ ಮನೆ ಬಿಟ್ಟು ಹೋಗಿರುತ್ತಾಳೆ ಅಂತಾ ಅರ್ಜಿ ಸಲ್ಲಿಸಿದ್ದರಿಂದ ಪೊಲೀಸರು ಠಾಣೆಯಲ್ಲಿ ಪಂಚಾಯಿತಿ ಮಾಡಿರುತ್ತಾರೆ ಅಂದರೆ ಸಾಕ್ಷಿಯು ತಾನು ತನ್ನ ತಾಯಿ ಜೊತೆ ಹೋಗಿರುವುದಾಗಿ ಹೇಳುತ್ತಾರೆ. ನಂತರ ನಾನು ಹಾಗೂ ನನ್ನ ಗಂಡ ಕಲಬುರಗಿಗೆ ಬಂದು ಒಂದು ಒಪ್ಪಂದ ಪತ್ರ ಮಾಡಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಛಯಾ ಚಿತ್ರವನ್ನು ನೋಡಿ ಗುರುತಿಸುತ್ತಾಳೆ ಆದರೆ ಸಹಿ ತನ್ನದು ಅಲ್ಲ ಎಂದು ಹೇಳುತ್ತಾಳೆ. ಸದರಿ ದಾಖಲೆಯಲ್ಲಿ ಇರುವ ತನ್ನ ಗಂಡನ ಛಾಯಾ ಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸುತ್ತಾಳೆ. ದಿಃ 18-07-2018 ರಂದು ನ್ಯಾಯವಾದಿ ಮೂಲಕ ಒಪ್ಪಂದ ಪತ್ರ ಮಾಡಿಕೊಂಡು ಕೌಟುಂಬಿಕ ನ್ಯಾಯಾಲಯ ಕಲಬುರಗಿಯಲ್ಲಿ ಹಾಜರುಪಡಿಸಿರುತ್ತೇವೆ ಅಂದರೆ ಸರಿ. ಸದರಿ ಒಪ್ಪಂದ ಪತ್ರದಲ್ಲಿ ನನಗೆ ಹಾಗೂ ನನ್ನ ಗಂಡನಿಗೆ ಸಂಬಂಧಿಸಿದ್ದು, ಮೂರನೇಯವರಿಗೆ ಸಂಬಂಧಿಸಿರುವುದಿಲ್ಲ ಅಂತಾ ಬರೆಯಲಾಗಿದೆ ಅಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದರಲ್ಲಿ ಯಾವುದೇ ಮೋಸ, ವಂಚನೆ ಇಲ್ಲದೇ ಸ್ವಖುಷಿಯಿಂದ ಅದನ್ನು ಓದಿ ಹೇಳಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಅದರಲ್ಲಿ ನನ್ನ ದಾರಿ ನನಗೆ ಹಾಗೂ ಅವನ ದಾರಿ ಅವನಿಗೆ ಹಾಗೂ ಮಗುವಿಗೆ ಯಾವುದೇ ಸಂಬಂಧ ಇಲ್ಲ ಅಂತಾ ಬರೆಯಲಾಗಿದೆ ಅಂದರೆ ಸರಿಯಲ್ಲ.

ಸದರಿ ಒಪ್ಪಂದ ಪತ್ರ ಮಾಡಿ ಮನೆಗೆ ಹೋದ ನಂತರ ನನ್ನ ತಾಯಿಯ ಮಾತು ಕೇಳಿ ನನ್ನ ಗಂಡ ಸರ್ಕಾರ ನೌಕರ ಇರುವ ಕಾರಣ ಆತನಿಂದ ಹಣ ಕೀಳುವ ಉದ್ದೇಶದಿಂದ ಪ್ರಸ್ತುತ ಖೊಟ್ಟಿ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಕಲಬುರಗಿ 2 ನೇ ಹೆಚ್ಚುವರಿ ಜೆ. ಎಂ. ಎಫ್. ಸಿ. ನ್ಯಾಯಾಲಯದಲ್ಲಿ ನನ್ನ ಗಂಡನಿಗೆ ತೊಂದರೆ ಕೊಡುವ ಉದ್ದೇಶದಿಂದ ಕ್ರಿಮಿನಲ್ ಮಿಸಿಲೇನ್ಸ ನಂಃ

1977/2020 ರಂತೆ ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು Maintanance ಅರ್ಜಿ ಹಾಕಿರುವುದಾಗಿ ಹೇಳುತ್ತಾರೆ. ಸದರಿ ಅರ್ಜಿಯಲ್ಲಿ ಪ್ರತಿ ತಿಂಗಳು ರೂ. 3000/- ಜೀವನಾಂಶ ಕೊಡಬೇಕು ಅಂತಾ ಅದೇಶ ಆಗಿರುತತದೆ ಅಂದರೆ ಸರಿ. ಆರೋಪಿ ನಂಃ 1 ಸರ್ಕಾರಿ ನೌಕರಸ್ತನು, ಗೌರವಸ್ತನು ಇದ್ದು ಆತನಿಗೆ ಮಾನಸಿಕ ಕಿರುಕುಳ ಕೊಡುವ ಉದ್ದೇಶದಿಂದ ಕಲಬುರಗಿ ನ್ಯಾಯಾಲಯದಲ್ಲಿ ಜೀವನಾಂಶ ಅರ್ಜಿ, ಮಗುವಿಗಾಗಿ ಅರ್ಜಿ ಹಾಗೂ ಪ್ರಸ್ತುತ ಕ್ರಿಮಿನಲ್ ಪರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆದರೂ ಸಹ ಆತನು ಎಂ. ಸಿ. ನಂಃ 91/2021 ರಂತೆ ಹೆಂಡತಿ ಬೇಕು ಅಂತಾ ಅರ್ಜಿ ಸಲ್ಲಿಸಿರುತ್ತಾನೆ ಅಂದರೆ ಸರಿ. ಅದೂ ಸಹ ಚಾಲ್ತಿಯಲ್ಲಿ ಇದೆ ಅಂದರೆ ಸರಿ.

ಆರೋಪಿ ನಂಃ 1 ರವರಿಗೆ ಸಾಕಷ್ಟು ಸಂಬಳ ಹಾಗೂ ಅದಾಯ ಇರುವ ಕಾರಣ ಮದುವೆ ಕಾಲಕ್ಕೆ ಯಾವುದೇ ಹಣವನ್ನು ತೆಗೆದುಕೂಳ್ಳದೇ ಮದುವೆಯಾಗಿರುತ್ತಾರೆ ಅಂದರೆ ಸರಿಯಲ್ಲ. ಭಗವಂತರಾಯ ಹಾಗೂ ಸಂಗಮೇಶ್ವರ ಇವರು ನನ್ನ ಸಂಬಂಧಿಕರು ಅಂದರೆ ಸರಿ. ಪಂಚಾಯಿತಿಯು ಗಂಡನ ಮನೆಯಲ್ಲಿ ಆಗಿರುತ್ತದೆ. ಭಗವಂತರಾಯ ಹಾಗೂ ಸಂಗಮೇಶರವರು ಸೋದರಮಾವರಿದ್ದು ಆರೋಪಿ ನಂಃ 1 ರವರ ಮನೆಯಲ್ಲಿ ಪಂಚಾಯಿತಿ ಆಗಿ ಅವರು ಕರೆದುಕೊಂಡು ಹೋಗಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಪಂಚಾಯಿತಿಗೆ ಅವರಿಬ್ಬರೂ ಮಾತ್ರ ಇದ್ದಿರುತ್ತಾರೆ. ಪಂಚಾಯಿತಿಗೆ ಗಂಡನ ಕಡೆಯವರು ಹಾಗೂ ಹೆಣ್ಣಿನ ಕಡೆಯವರು ಹಾಜರಿದ್ದು ಪಂಚಾಯಿತಿ ಆಗುತ್ತದೆ ಅಂದರೆ ಸರಿ. ಆದ್ದರಿಂದ ಇಬ್ಬರ ಸಮಕ್ಷಮ ಪಂಚಾಯಿತಿ ಆಗಿರುವುದಿಲ್ಲ ಅಂದರೆ ಸರಿಯಲ್ಲ.

ಆರೋಪಿ ನಂಃ 4 ರವರ ಮಗ ಬಹಿರ್ದೆಸೆಗೆ ಕುಂತಾಗ ಅವಳ ಮಗಗನ್ನು ಅಪಮಾನ ಮಾಡಿರುತ್ತೇನೆ ಅಂತಾ ನನ್ನ ವಿರುದ್ದ ಆರೋಪಿ ಮಾಡಿರುತ್ತಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತನು ಕೌಟುಂಬಿಕ ನ್ಯಾಯಾಲಯದಲ್ಲಿ ಹಾಜರು ಇರಲಿಲ್ಲ ಅಂತಾ ಮರತೂರಕ್ಕೆ ಕೇಳಲು ಹೋಗಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ದಿನ ನೀನು ಹಾಗೂ ನಿಮ್ಮ ವಕೀಲರು ಹಾಜರು ಇರಲಿಲ್ಲ ಅಂದರೆ ಸಾಕ್ಷಿಯು ನೀವೇ ಹಾಜರು ಇರಲಿಲ್ಲ ಎಂದು ಹೇಳುತ್ತಾರೆ. ಆನಂದ ತಂದೆ ಅಶೋಕ ಇತನು ನನಗೆ ಏನೂ ಆಗುವುದಿಲ್ಲ. ಆತನು ಕಲಬುರಗಿಯ ನಿವಾಸಿ. ಸಾಕ್ಷಿಗೆ ಆನಂದ ಚಾಸಾ-7 ರವರು ನಿಮಗೆ ತವರು ಮನೆಯಿಂದ ಅಥವಾ ಗಂಡನ ಮನೆಯಿಂದ ಪರಿಚಯ ಅಂದರೆ ಸಾಕ್ಷಿಯು ಎರಡೂ ಕಡೆಯಿಂದ ಪರಿಚಯ ಎಂದು ಹೇಳುತ್ತಾರೆ. ಆತನು ನನಗೆ 12 ರಿಂದ 13 ವರ್ಷಗಳಿಂದ ಪರಿಚಯಸ್ಥ. ಸದರಿ ವ್ಯಕ್ತಿಯು ಕಬುರಗಿ ನ್ಯಾಯಾಲಯಗಳಲ್ಲಿ ಪ್ರತಿ ಮುದ್ದತ್ತಿನಂದು ನನ್ನನ್ನು ಹಾಜರಾತಿಗಾಗಿ ಕರೆದುಕೊಂಡು ಬರುತ್ತಾನೆ ಅಂದರೆ ಸರಿಯಲ್ಲ. ನಾನು ಚಾಸಾ-6 ಮತ್ತು 7 ರವರ ಮಾತು ಕೇಳಿ 2 ನೇ ಮದುವೆಯಾಗಿರುವುದಾಗಿ ಆರೋಪಿತನ ವಿರುದ್ಧ ಖೊಟ್ಟಿ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಆನಂದ ಇತನ

ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆನಂದ ಇತನ ಸುಳ್ಳು ಮಾತುಗಳನ್ನು ಕೇಳಿ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಇಂದಿರಾಬಾಯಿ ನನ್ನ ತಾಯಿಯಾಗಬೇಕು. ದಿಃ 26-01-2019 ರಂದು ನಾನು ಹಾಗೂ ನನ್ನ ತಾಯಿ ಮರತೂರ ಗ್ರಾಮಕ್ಕೆ ಹೋಗಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಬಿ ಹೊಟೇಲ್ ಬಳಿ ಆರೋಪಿ ನಂಃ 1 ಹಾಗೂ ಇತರರು ಹಾಜರುಇದ್ದು ಅವರ ಪರಿಚಯ ನನಗೆ ಇರುವುದಿಲ್ಲ. ಆರೋಪಿತನು 10 ಮದುವೆ ಆಗುತ್ತೇನೆ ಅಂತಾ ಹೇಳಿರುವುದಾಗಿ ಕಟ್ಟು ಕಥೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಬಿ ಹೊಟೇಲ್ ಬಳಿ ಜಗಳ ಆಗಿ ನಾನು ತವರು ಮನೆಗೆ ಹೋಗಿರುತ್ತೇನೆ. ಪೊಲೀಸ್ ಠಾಣೆಗೆ ಪ್ರಕರಣ ದಾಖಲಿಸಲು ಎಷ್ಟು ದಿನಗಳ ತರುವಾಯ ಹೋಗಿರುತ್ತೀರಿ ಅಂದರೆ ಸಾಕ್ಷಿಯು 1 ತಿಂಗಳ ನಂತರ ಎಂದು ಹೇಳುತ್ತಾರೆ. ಪೊಲೀಸ್ ಠಾಣೆಗೆ ಹೋಗುವಾಗ ಆನಂದ ನನ್ನ ಜೊತೆಯೇ ಇದ್ದನು ಅಂದರೆ ಸರಿ. ಅದೇ ರೀತಿ ತಾಯಿಯೂ ಸಹ ಜೊತೆಯಲ್ಲಿ ಇದ್ದಳು ಅಂದರೆ ಸರಿ. ಇಷ್ಟೆಲ್ಲಾ ಕಾರಣಕ್ಕೆ ಅಂದ ಹಾಗೂ ನಿಮ್ಮ ತಾಯಿಯೇ ಕಾರಣ ಇರುತ್ತಾರೆ ಅಂದರೆ ಸರಿಯಲ್ಲ. ನಾವು ಪೊಲೀಸ್ ಠಾಣೆಗೆ ಹೋದ ಸಮಯ ನನಗೆ ನೆನಪಿಗೆ ಇಲ್ಲ. ನಿಪಿ-1 ರಲ್ಲಿ ಆರೋಪಿ ನಂಃ 1 ಹಾಗೂ ಆತನ ಮನೆಯವರು ವರದಕ್ಷಿಣೆ ಕಿರುಕುಳ ನೀಡಿರುತ್ತಾರೆ ಅಂತಾ ಎಲ್ಲಿಯೂ ಬರೆದಿರುವುದಿಲ್ಲ ಅಂದರೆ ಸಾಕ್ಷಿಯು ಬರೆದಿರುವುದಾಗಿ ನುಡಿಯುತ್ತಾರೆ. ಆರೋಪಿತರು ಸಣ್ಣ ಪುಟ್ಟ ವಿಷಯಕ್ಕೆ ಕಿರುಕುಳ ನೀಡಿರುತಾತರೆ ಅಂದರೆ ಖೊಟ್ಟಿ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿ ನಂಃ 3 ಮತ್ತು 4 ರವರು ಅವರ ಗಂಡನ ಮನೆಯಲ್ಲಿಯೇ ವಾಸ ಇದ್ದಾರೆ ಅಂದರೆ ಸಾಕ್ಷಿಯು ಅಲ್ಲಿಯೇ ಇರುವುದಾಗಿ ಹೇಳುತ್ತಾರೆ.

ಆರೋಪಿ ನಂಃ 1 ರವರಿಗೆ ಸಾಕಷ್ಟು ಸರ್ಕಾರಿ ಸಂಬಳ ಹಾಗೂ ಆದಾಯ ಇರುವುದರಿಂದ ಆತನೂ ಯಾವತ್ತಿಗೂ ವರದಕ್ಷಿಣೆ ಕಿರುಕುಳ ನೀಡದೇ ಇದ್ದರೂ ಸಹ ನನ್ನ ತಾಯಿ ಹಾಗೂ ಆನಂದನ ಮಾತು ಕೇಳಿ ಆತನಿಂದ ಹಣ ಕೀಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**

**-Sd-**

**ಸಿವಿಲ್ ನ್ಯಾಯಾಧೀಶರು, ಶಹಬಾದ.**